

ದಾರಿಯಲ್ಲಿ ಹೋಗುತ್ತಿದ್ದರೆ ಅದರ ಬದಿಗೆ ಇಳಿಜಾರು ಬಯಲಿನಲ್ಲಿ ಭತ್ತದ ಗದ್ದೆ, ಅದಕ್ಕೆ ಒತ್ತರಿಸಿಕೊಂಡು ನಿಂತ ಇನ್ನೊಂದು ಬೆಟ್ಟದ ಬದಿಯದ್ದು ನನ್ನ ಮನೆಗೆ ಹೋಗುವ ದಾರಿ. ಅದರ ಮೇಲೆ ಭರ್ರೆಂದು ಹಾದು ಹೋಗುವ ಕೆಂಪು ಬಸ್ಸು ಕಾಣುವಾಗಲೆಲ್ಲ ದುಃಖ ಒತ್ತರಿಸಿ ಬಂದು ಹನಿಗಣ್ಣಾಗುತ್ತಿದ್ದೆ.

ಶಾಲಾ ದಿನಗಳಲ್ಲಿ ಅದೆಷ್ಟೋ ಕಿಲೋಮೀಟರ್ ಕ್ರಮಿಸಿ ಮುಖ್ಯ ರಸ್ತೆಗೆ ಓಡೋಡಿ ಬರುವುದು, ಅಲ್ಲಿ ಬರುವ ತುಂಬು ಬಸುರಿಯಂತಹ ಬಸ್ಸಿಗೆ ಹತ್ತಿ ಬಸ್ ಸ್ಟ್ಯಾಂಡಲ್ಲಿ ಇಳಿದು ಏದುಸಿರು ಬಿಟ್ಟುಕೊಂಡು ಶಾಲೆಯ ಪ್ರೇಯರ್‌ಗೆ ಸೇರಿಕೊಳ್ಳುವುದು, ಪುನಃ ಸಂಜೆ ಓಡಿಕೊಂಡೇ